ಜೆಎಸ್‌ಎಸ್ ಮಹಾವಿದ್ಯಾಪೀಠ

**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**

ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

ಊಟಿರಸ್ತೆ, ಮೈಸೂರು-೫೭೦ ೦೨೫

ESTD - 1964

50 ವರ್ಷಗಳು

☎ 0821-2548236 & 2548380 Fax: 0821-2548238 E-mail: jssautonomous@gmail.com


ಸಂಖ್ಯೆ: ಜೆಎಸ್‌ಎಸ್‌ಸಿಎಂ/ /2013-14 ದಿನಾಂಕ: 13-01-2014

## ಪ್ರಕಟಣೆಯ ಕೃಪೆಗಾಗಿ

## ಜೆಎಸ್‌ಎಸ್ ಕಾಲೇಜಿನಲ್ಲಿ ರೆಡ್‌ರಿಬ್ಬನ್ ಕ್ಲಬ್‌ನ ಸಮಾರೋಪ ಸಮಾರಂಭ

ಮೈಸೂರು ನಗರದ ಊಟಿರಸ್ತೆಯಲ್ಲಿನ ಜೆಎಸ್‌ಎಸ್ ಪದವಿ ಹಾಗೂ ಪದವಿಪೂರ್ವ ಕಾಲೇಜಿನಲ್ಲಿ ದಿನಾಂಕ 13-01-2014ರಂದು ರೆಡ್ ರಿಬ್ಬನ್ ಕ್ಲಬ್‌ನ ಸಮಾರೋಪ ಸಮಾರಂಭವು ನಡೆಯಿತು. ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಡಾ. ಟಿ.ಎಸ್. ಸತ್ಯನಾರಾಯಣರಾವ್, ಮನೋವೈದ್ಯರು, ಜೆಎಸ್‌ಎಸ್ ಆಸ್ಪತ್ರೆ, ಮೈಸೂರುರವರು ಮಾತನಾಡಿ ಏಡ್ಸ್ ಹಾಗೂ ಹೆಚ್.ಐ.ವಿಯು ಹೆಚ್ಚಾಗಿ ಅಸುರಕ್ಷಿತ ಲೈಂಗಿಕ ಕ್ರಿಯೆಯಿಂದ ಬರುತ್ತದೆ, ವೈದ್ಯರ ನಿರ್ಲಕ್ಷತೆಯಿಂದ ಕೂಡ ಈ ಕಾಯಿಲೆ ಹರಡುತ್ತದೆ HIV/AIDs ಬಗ್ಗೆ ಅರಿವು ಮೂಡಿಸಲು ಎಲ್ಲಾ ಶಾಲಾ, ಕಾಲೇಜುಗಳಲ್ಲಿ ಇದರ ಕುರಿತು ಮಾಹಿತಿ ಕಾರ್ಯಗಾರವನ್ನು ನಡೆಸಬೇಕೆಂದು ತಿಳಿಸಿದರು. ಇದರಿಂದ ಯುವ ಜನತೆಯಲ್ಲಿ ಎಚ್ಚರಿಕೆಯನ್ನು ಮೂಡಿಸುವುದು ಅವಶ್ಯಕ ಎಂದರು.

ಪದವಿ ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಎಂ.ಬಿ. ಮಲ್ಲಿಕಾರ್ಜುನ ಪಂಡಿತ್‌ರವರು ಅಧ್ಯಕ್ಷತೆ ವಹಿಸಿದ್ದರು. ರೆಡ್‌ರಿಬ್ಬನ್ ಕ್ಲಬ್‌ನ ವತಿಯಿಂದ ಏರ್ಪಡಿಸಿದ್ದ ಚರ್ಚೆ ಮತ್ತು ಪ್ರಬಂಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ಮತ್ತು ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್. ಸೋಮಶೇಖರ್‌ರವರು ವಿತರಿಸಿದರು.

ಡಿ.ಎಂ. ಚೈತ್ರ ಹಾಗೂ ಮಾಧುರಿ ಪಿ ಪ್ರಾರ್ಥಿಸಿದರು, ಪದವಿಪೂರ್ವ ಕಾಲೇಜಿನ ರೆಡ್‌ರಿಬ್ಬನ್ ಕ್ಲಬ್‌ನ ಸಂಚಾಲಕರಾದ ಶ್ರೀ ಎನ್.ಸಿ. ನಾಗರಾಜು ಸ್ವಾಗತಿಸಿದರು. ಪದವಿ ಕಾಲೇಜಿನ ಶ್ರೀ ಬಿ. ಪ್ರಭುಸ್ವಾಮಿ ವಂದಿಸಿದರು. ಉಪನ್ಯಾಸಕರಾದ ಡಾ. ಡಿ.ಎಂ. ಮಹೇಂದ್ರಮೂರ್ತಿ ನಿರೂಪಿಸಿದರು.

(ಪ್ರೊ. ಎಂ.ಬಿ. ಮಲ್ಲಿಕಾರ್ಜುನ ಪಂಡಿತ್)
**ಪ್ರಾಂಶುಪಾಲರು**
ಜೆ.ಎಸ್.ಎಸ್. ಕಾಲೇಜು
ಊಟಿ ರಸ್ತೆ, ಮೈಸೂರು-570 025

ಗೆ

ಸಂಪಾದಕರು / ವರದಿಗಾರರು

- - - - - - - - - - - - - - -

- - - - - - - - - - - - - - -